**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**ವಾರ್ಡ್ 93, ವಸಂತನಗರ**

**ವಾರ್ಡ್ ಸಮಿತಿ ಸಭೆಯ ನಡಾವಳಿಗಳು**

ದಿನಾಂಕ:18-10-2022 ರಂದು ಮಂಗಳವಾರ ಬೆಳಿಗ್ಗೆ 11.30 ಗಂಟೆಗೆ ಮಾನ್ಯ ನೋಡೆಲ್ ಅಧಿಕಾರಿಗಳು ಹಾಗೂ ತೋಟಗಾರಿಕೆ ಅಧೀಕ್ಷಕರು (ಪೂರ್ವ) ರವರ ಅಧ್ಯಕ್ಷತೆಯಲ್ಲಿ ವಾರ್ಡ್ ಸಮಿತಿಯ ಸಭೆಯನ್ನು ನಡೆಸಲಾಯಿತು. ಹಾಗೂ ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ:93 ಬಿಬಿಎಂಪಿ ಸಭೆಯನ್ನು ನಡೆಸಿಕೊಟ್ಟರು.

ಸಮಿತಿಸಭೆಗೆ ಹಾಜರಾದ ಅಧಿಕಾರಿಗಳು ಹಾಗೂ ಸಮಿತಿ ಸದಸ್ಯರುಗಳು,

| ಕ್ರಮ ಸಂಖ್ಯೆ: | ಹೆಸರು | ಸಮಿತಿ ಸಭೆಯ | ಮೊಬೈಲ್ ಸಂಖ್ಯೆ |
|---|---|---|---|
| | | ನೋಡೆಲ್ ಅಧಿಕಾರಿಗಳು | |
| 1 | ಶ್ರೀ.ಸುಧೀಂದ್ರ ಕುಮಾರ್ | ಸಹಾಯಕ ಅಭಿಯಂತರರು | |
| 2 | ಶ್ರೀ.ಧರ್ಮರಾಜ ಜಿ ನಾಯಕ್ | ಕೆಲಸ ಪರಿವೀಕ್ಷಕರು | |
| 3 | ಶ್ರೀ.ಜಯರಾಜು | ಕಂದಾಯ ವಸೂಲಿಗಾರರು | |
| 4 | ಶ್ರೀ.ಮೂರ್ತಿ ಎಲ್.ಎಂ | ವಾರ್ಡ್ ಮಾರ್ಷಲ್ | |
| 5 | ಶ್ರೀ.ಅಜೀತ್ ಕುಮಾರ್. | ಕಿರಿಯ ಆರೋಗ್ಯ ಪರಿವೀಕ್ಷಕರು | |
| 6 | ಶ್ರೀ.ಶರತ್ ಕುಮಾರ್ | ವೈದ್ಯಾಧಿಕಾರಿಗಳು | |
| 7 | ಶ್ರೀಮತಿ.ಸನಾ ಅಯುಬ್ | ಸದಸ್ಯರು | |
| 8 | ಶ್ರೀ.ಜೆ.ಕೆ.ಸಿ ಕುಮಾರ | ಸ್ಥಳೀಯರು | |
| 9 | ಶ್ರೀ.ಪ್ರಕಾಶ್ ನೆಡುಂಗಾಡಿ | ಕಿರಿಯ ಆರೋಗ್ಯ ಪರಿವೀಕ್ಷಕರು | |
| 10 | ಶ್ರೀ.ಮನೋಜ್ ಕುಮಾರ್ | ವಾರ್ಡ್ ರಹವಾಸಿ | |
| 11 | ಶ್ರೀ.ಎಂ.ಎಸ್. ನಂಜುಡಮೂರ್ತಿ | ಸ್ಥಳೀಯರು | |
| 12 | ಶ್ರೀ.ರಾಮಲಿಂಗಮ್ | ಸ್ಥಳೀಯರು | |
| 13 | ಶ್ರೀ.ಚಂದ್ರಶೇಖರ್.ಎ | ಸ್ಥಳೀಯರು | |
| 14 | ಶ್ರೀ.ಸುನಿಲ್ ಎಸ್. | ಸ್ಥಳೀಯರು | |
| 15 | ಶ್ರೀ.ಎಸ್.ಎನ್. ಪ್ರಸಾದ್ | | |

**ಈ ಕೆಳಕಂಡ ಅಂಶಗಳನ್ನು ಚರ್ಚಿಸಿ ಸಂಬಂಧಪಟ್ಟ ಅಧಿಕಾರಿಗಳಿಗೆ ಕ್ರಮ ವಹಿಸಲು ಸೂಚಿಸಿದರು.**

1) ಶ್ರೀ.ಜೆ.ಕೆ.ಸಿ ಕುಮಾರ್ ರವರು ಮಾತಾನಾಡಿ ಕಾನೂನು ಮತ್ತು ಸುವ್ಯವಸ್ಥೆ ಇಲಾಖೆಯಿಂದ ಸತತವಾಗಿ ಗೈರು ಹಾಜರಿಯಾಗುತ್ತಿರುವುದರಿಂದ ಸಾರ್ವಜನಿಕರ ಸಮಸ್ಯೆಗೆ ಸ್ಪಂದಿಸಲು ಸಂಬಂಧಪಟ್ಟವರಿಗೆ ಪತ್ರ ಬರೆಯಲು ಸೂಚಿಸುತ್ತಾ, ಪಾರ್ಕ್‌ಗಳಲ್ಲಿ ಬೀದಿ ದೀಪಗಳನ್ನು ಅಳವಡಿಸಲು ಮತ್ತು ಸ್ಮಾರ್ಟ್ ಸಿಟಿ ರಸ್ತೆಗಳಲ್ಲಿ ಬೀದಿ ದೀಪಗಳನ್ನು ನಿರ್ವಹಣೆ ಮಾಡಲು ಕಷ್ಟಕರವಾಗುತ್ತಿದ್ದು, ಈ ಬಗ್ಗೆ ಏಣಿಗಳನ್ನು ಉಪಯೋಗಿಸಲು ವಿವರಿಸಲಾಯಿತು.

Scanned with CamSca

ಮತ್ತು ರೈಲ್ವೆ ಸಾಮಾನಾಂತರ ರಸ್ತೆ ಕಾಮಗಾರಿಯು ಕುಂಠಿತಗೊಂಡಿದ್ದು, ನವೆಂಬರ್-2022 ರ ಅಂತ್ಯದಲ್ಲಿ ಪೂರ್ಣಗೊಳಿಸುವುದಾಗಿ ಸಂಬಂಧಪಟ್ಟ ಅಧಿಕಾರಿಗಳು ವಿವರಿಸಿದರು. ಸಾರ್ವಜನಿಕರ ಹಿತದೃಷ್ಟಿಯಿಂದ ಬೆಂಗಳೂರು-ಒ ಮತ್ತು ಮ್ಯಾಜಿಕ್ ಬಾಕ್ಸ್ ಹತ್ತಿರ ಸಾರ್ವಜನಿಕ ಶೌಚಾಲಯ ನಿರ್ಮಿಸಲು ಸೂಚಿಸಿದರು. ಕೊನೆಯದಾಗಿ ಅಣ್ಣಯ್ಯಪ್ಪ ಬ್ಲಾಕ್ ಮತ್ತು ಕೆಂಪಣ್ಣ ಬ್ಲಾಕ್‌ಗಳಲ್ಲಿರುವ ಕನ್ಸರ್‌ವೆನ್ಸಿಗಳು ಸಾರ್ವಜನಿಕರಿಂದ ದುರುಪಯೋಗವಾಗುತ್ತಿರುವುದಾಗಿ ಪ್ರಸ್ತಾಪಿ ಅಂತಹ ಕನ್ಸರ್‌ವೆನ್ಸಿಗಳನ್ನು ಒಣ ಕಸ ಸಂಗ್ರಹಣೆಗಾಗಿ ಯಾಕೆ ಉಪಯೋಗಿಸಕೊಳ್ಳಬಾರದೆಂದು ಸಲಹೆ ನೀಡಿದರು.

2) ಶ್ರೀ.ಪ್ರಕಾಶ್ ನೆಡುಂಗಾಡಿ ರವರು ಮಾತನಾಡಿ ಡಯಾಲಿಸಸ್ ಕೇಂದ್ರವನ್ನು ಮತ್ತು ನಮ್ಮ ಕ್ಲೀನಿಕ್‌ಗಳನ್ನು ಪ್ರಾರಂಭಿಸುವ ಬಗ್ಗೆ ಸೂಚಿಸಿದದ್ದು, ಈ ಬಗ್ಗೆ ವೈದ್ಯಾಧಿಕರಿಗಳಾದ ಶ್ರೀಮತಿ.ಸನಾ ಅಯುಬ್ ಮಾತನಾಡಿ ಪ್ರಸ್ತಾವನೆಯು ಸರ್ಕಾರದ ಹಂತ್ತದಲ್ಲಿ ಇರುವುದಾಗಿ ತಿಳಿಸಿದರು. ಮತ್ತು ವಸಂತನಗರ 8ನೇ ಮುಖ್ಯರಸ್ತೆಯಲ್ಲಿ ಭಾರಿ ಮಳೆಯಿಂದ ನೀರು ಸಂಗ್ರವಾಗುತ್ತಿದ್ದು, ಈ ಬಗ್ಗೆ ಶಾಶ್ವತ ಪರಿಹಾರಕ್ಕಾಗಿ ಬೃಹತ್ ನೀರುಗಾಗಲು ಇಲಾಖೆಯಿಂದ ಮುಚ್ಚಿಹೋದ ನೀರುಗಾಲುವೆಯನ್ನು ಹೊಸದಾಗಿ ನಿರ್ವಹಿಸಲು ಸಂಬಂಧಪಟ್ಟ ಇಲಾಖೆಯಿಂದ ಟೆಂಡರ್ ಕರೆಯಲಾಗಿದ್ದು, ಸದರಿ ಪ್ರಸ್ತಾವನೆಯು ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲಾಗಿರುತ್ತದೆಂದು ಸಂಬಂಧಪಟ್ಟ ಇಲಾಖೆಯಿಂದ ವವರಣೆ ಪಡೆಯಲಾಯಿತು.

ವಾರ್ಡ್ ಇಂಜಿನಿಯರ್ ಹಾಗೂ ಸದಸ್ಯರಾದ ಶ್ರೀ.ಧರ್ಮರಾಜ್ ಜಿ ನಾಯಕ್ ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ:93 ರವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಿ/-
ಮಾನ್ಯ ನೋಡಲ್ ಅಧಿಕಾರಿಗಳು
ವಾರ್ಡ್-93, ವಸಂತನಗರ
ಬಿ.ಬಿ.ಎಂ.ಪಿ

ಸದಸ್ಯ ಕಾರ್ಯದರ್ಶಿಗಳು
ವಾರ್ಡ್-93, ವಸಂತನಗರ
ಬಿ.ಬಿ.ಎಂ.ಪಿ

Scanned with CamSca